ಪ್ರತಿ ಮನೆಗೂ 1,500 ರೂಪಾಯಿಗಳಿಂದ 3,000 ರೂಪಾಯಿಗಳವರೆಗೆ ಸಾಲ ಕೊಡಬೇಕೆಂದು ಮಾಡಿದ್ದೇವೆ. ಇದುವರೆಗೆ 17,350 ಮನೆಗಳಿಗೆ ಮೂರುವರೆ ಕೋಟಿ ರೂಪಾಯಿಗಳನ್ನು ಸಾಲ ಕೊಟ್ಟಿದ್ದೇವೆ. ಎರ್.ಐ.ಸಿ. ಇಂದ ಒಂದು ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಈಗ ಪೆಂಡಿಂಗ್ ಇರತಕ್ಕ ಅರ್ಜಿಗಳನ್ನು ಇತ್ಯರ್ಥ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ ಎಂದು ನಾನು ಈಗಾಗಲೇ ಹೇಳಿದ್ದೇನೆ.

Bus Shelter at village Nittur

387. Sri PRABHURAO JAGADALE (Hulsoor).—

Will the Minister for Transport be pleased to state :—

(*a*) whether there is any proposal before Government for providing a bus shelter at the Village Nittur (B), Taluk Bhalki, District Bidar ;

(*b*) if so, the steps taken to expedite its sanction ?

Sri H. C. BORIAH (Deputy Minister for Transport).—

(*a*) Yes.

(*b*) The construction of the shelter is included in the programme of works during the current year 1970 71. The work will be taken up as soon as a site becomes available for which action is under progress.

ಶ್ರೀ ಪ್ರಭುರಾವ್ ಜಗದಾಳೆ.—ಸ್ವಾಮಿ ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ನಿಟ್ಟೂರು (ಬಿ) ಗ್ರಾಮದ ಬಸ್ ನಿಲ್ದಾಣದಲ್ಲಿ ಬಸ್ ಷೆಲ್ಟರನ್ನು ಯಾವಾಗ ಕಟ್ಟಿಸಿಕೊಡುತ್ತೀರಿ ?

ಶ್ರೀ ಎಚ್. ಸಿ. ಬೋರಯ್ಯ.—1970-71ನೇ ಸಾಲಿನ ಬಜೆಟ್ಟಿನಲ್ಲಿ ಆ ಬಸ್ ಷೆಲ್ಟರಿನ ಕಾರ್ಯವನ್ನು ಸೇರಿಸಲಾಗಿದೆ. ಅದಕ್ಕೆ ಬೇಕಾದ ನಿವೇಶನವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದು ದೊರಕುವ ನಂದರ್ಭವಿದೆ. ಅದು ದೊರಕಿದ ಕೂಡಲೇ ಆ ಕೆಲಸವನ್ನು ಕೈಗೊಳ್ಳಲಾಗುವುದು.

Construction of 'Vote Halla' Dam at Channenahalli Village in Belur Taluk

394. Sri K. P. CHIKKEGOWDA (Sakaleshpur).—

Will the Chief Minister be pleased to state :—

(*a*) the stage at which the work of construction of 'Vote Halla' dam at Channenahalli Village in Belur taluk is pending ;

(*b*) whether there is a proposal before Government to take up the said work during the current year or at least in the near future ?

Sri VEERENDRA PATIL (Chief Minister).—

(*a*) The scheme has been sent to the Government of India for technical clearance.

(*b*) Does not arise in view of reply to (*a*) above.

ಶ್ರೀ ಕೆ. ಪಿ. ಚಿಕ್ಕೇಗೌಡ.—ಸ್ವಾಮಿ, ಬೇಲೂರು ತಾಲ್ಲೂಕಿನ ಚನ್ನೇನಹಳ್ಳಿ ಗ್ರಾಮದ ವ್ಯೋಚೆ ಹಳ್ಳ ಅಣೆಕಟ್ಟನ್ನು ಕಟ್ಟುವುದಕ್ಕೆ ಸಂಬಂಧಪಟ್ಟ ಯೋಜನೆಯನ್ನು ಭಾರತ ಸರ್ಕಾರದವರ ತಾಂತ್ರಿಕ ಮಂಜೂರಾತಿಗೆ ಕಳುಹಿಸಿಕೊಡರಾಗಿದೆ ಎಂದು ಹೇಳಿದ್ದೀರಿ. ಈಗಾಗಲೇ ತಾವು ಹಾರಂಗಿ ಮತ್ತು ಹೇಮಾವತಿ ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿ ಇಲ್ಲದೆ ಕೆಲಸವನ್ನು ಪ್ರಾರಂಭ ಮಾಡಿದ್ದೀರಿ, ಅದರಂತೆ ಈ ಯೋಜನೆಯನ್ನೂ ಏತಕ್ಕೆ ಷುರು ಮಾಡಬಾರದು ?

†ಶ್ರೀ ವೀರೇಂದ್ರ ಪಾಟೀಲ್.—ತಾಂತ್ರಿಕ ಮಂಜೂರಾತಿ ಇಲ್ಲದಿದ್ದರೂ ಈ ಯೋಜನೆಯನ್ನು ಮಾಡಬೇಕಾಗಿದ್ದರೆ ಸಾಕಷ್ಟು ಪ್ರಮಾಣದಲ್ಲಿ ದುಡ್ಡು ಬೇಕಾಗುತ್ತದೆ. ಎಲ್ಲವನ್ನೂ ಪ್ರಾರಂಭ ಮಾಡಿ ಅರ್ಧಂಬರ್ಧ ಮಾಡಿದರೆ ಪ್ರಯೋಜನವಿಲ್ಲ. ಅದರ ಸಲುವಾಗಿ ಯಾವ ಕೆಲಸವನ್ನು ಪ್ರಾರಂಭ ಮಾಡುವುದಕ್ಕಾಗಲೀ ಅದಕ್ಕೆ ಎಷ್ಟರಮಟ್ಟಿಗೆ ದುಡ್ಡನ್ನು ಒದಗಿಸುವುದಕ್ಕೆ ಸಾಧ್ಯ ಇದೆ ಎಂಬುದನ್ನು ನಾವು ನೋಡುತ್ತೇವೆ. ಅದರ ಸಲುವಾಗಿ ತಾಂತ್ರಿಕ ಮಂಜೂರಾತಿಗಾಗಿ ಕಾಯುತ್ತಿದ್ದೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ತಾಂತ್ರಿಕ ಮಂಜೂರಾತಿಗಾಗಿ ಕಳುಹಿಸಲಾಗಿದೆ ಎಂದು ಹೇಳಿದ್ದೀರಿ. ಇದು ನಾನ್ ಷೆಡ್ಯೂಲ್ಡ್ ರಿವರ್ ಆದ್ದರಿಂದ ಮತ್ತು ಕೆಲವೇ ಲಕ್ಷ ರೂಪಾಯಿಗಳಲ್ಲಿ ಈ ಯೋಜನೆಯು ಕಾರ್ಯಗತವಾಗುವುದರಿಂದ ಕೇಂದ್ರ ಸರ್ಕಾರದವರ ಅನುಮತಿಗಾಗಿ ಕಾಯದೆ ತಾವೇ ಬೇಗ ತೆಗೆದುಕೊಳ್ಳುವುದಕ್ಕೆ ಇರುವ ಅಡ್ಡಿ ಏನು ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಸಣ್ಣದು, ದೊಡ್ಡದು ಎಂಬ ಪ್ರಶ್ನೆ ಇಲ್ಲ. ಈ ಯೋಜನೆಗೆ ಎರಡು ಕೋಟಿ ರೂಪಾಯಿಗಳ ಖರ್ಚು ಇರುವುದರಿಂದ ಕೇಂದ್ರ ಸರ್ಕಾರದವರ ಮಂಜೂರಾತಿಗಾಗಿ ಕಳಿಸಿದ್ದೇವೆ. ಅಲ್ಲಿಂದ ಮಂಜೂರಾತಿ ಬಂದ ಮೇಲೆ ಈ ಯೋಜನೆಯನ್ನು ಪ್ರಾರಂಭ ಮಾಡೋಣ ಎಂದು ಮನಸ್ಸಿನಲ್ಲಿಟ್ಟುಕೊಂಡಿದ್ದೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಈ ಯೋಜನೆಯಿಂದ ಆಲೂರಿನಲ್ಲಿ ಎಷ್ಟು ಎಕರೆ ಸಾಗುವಳಿಯಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಆಲೂರು ಮತ್ತು ಬೇಲೂರಿನಲ್ಲಿ ಎರಡು ತಾಲೆಗಳಿಂದ ಒಟ್ಟು 6,500 ಎಕರೆಯಲ್ಲಿ ಖರೀಫ್ ಬೆಳೆ ಮತ್ತು 6,500 ಎಕರೆಯಲ್ಲಿ ರಾಬಿ ಬೆಳೆಯಾಗುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಇಂತಹ ಎಷ್ಟು ಯೋಜನೆಗಳನ್ನು ಕೇಂದ್ರ ಸರ್ಕಾರದವರ ಮಂಜೂರಾತಿಗಾಗಿ ಇದುವರೆಗೆ ಕಳಿಸಿದ್ದೀರಿ ! ಇಂತಹ ಸಣ್ಣ ಸಣ್ಣ ಯೋಜನೆಗಳನ್ನು ಕೇಂದ್ರ ದವರ ಅನುಮತಿಗಾಗಿ ಕಳಿಸದೆ ಕ್ಷಾಮ ಪರಿಹಾರ ನಿಧಿಯಿಂದಲೇ ಏತಕ್ಕೆ ಕಾರ್ಯಗತ ಮಾಡಬಾರದು !

ಶ್ರೀ ವೀರೇಂದ್ರ ಪಾಟೀಲ್.—ಎಲ್ಲ ಮಾನ್ಯ ಸದಸ್ಯರು ಕ್ಷಾಮ ಪರಿಹಾರ ನಿಧಿಯಿಂದ ಇಂತಹ ಯೋಜನೆಗಳನ್ನು ಕೈಕೊಳ್ಳಬಹುದೆಂದು ಹೇಳಿದರೆ ನಂತರ ಅದನ್ನು ವಿಚಾರ ಮಾಡಬಹುದು. ಕ್ಷಾಮ ಪರಿಹಾರ ಕೆಲಸಗಳನ್ನು ಕೈಕೊಳ್ಳುವುದು ಕ್ಷಾಮ ಬಂದ ಕಡೆ ಜನರಿಗೆ ಉದ್ಯೋಗ ಸಿಗಲಿ ಎಂಬ ದೃಷ್ಟಿಯಿಂದ. ಈ ಕಾರಣದಿಂದ ಕೇಂದ್ರದವರು ನಮಗೆ ಸಹಾಯಮಾಡುತ್ತಾರೆ. ಈ ಹಣವನ್ನು ಬೇರೆ ಕೆಲಸಕ್ಕೆ ಉಪಯೋಗ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ಈ ಯೋಜನೆಯ ಬಗ್ಗೆ ಎಸ್ಟಿಮೇಟ್ ತಯಾರು ಮಾಡಿ ಕೇಂದ್ರಸರ್ಕಾರಕ್ಕೆ ಕಳಿಸಿದ್ದೇವೆ. ಅಲ್ಲಿಂದ ಬಂದ ಮೇಲೆ ಮುಂದೆ ವಿಚಾರ ಮಾಡಬೇಕೆಂದು ಮನಸ್ಸು ಮಾಡಿಕೊಂಡಿದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸದಸ್ಯರು ಮನಸ್ಸು ಮಾಡಿದರೆ ಕ್ಷಾಮ ಪರಿಹಾರ ನಿಧಿಯಿಂದ ಈ ಯೋಜನೆಗಳನ್ನು ಕೈಕೊಳ್ಳಬಹುದೆಂದು ಹೇಳಿದಿರಿ. ಕ್ಷಾಮ ಪರಿಹಾರಕ್ಕೆಂದು ಕೇಂದ್ರಸರ್ಕಾರದವರು ಕೊಟ್ಟಂತಹ ಹಣವನ್ನು ಇದಕ್ಕಾಗಿ ಖರ್ಚು ಮಾಡುವುದಕ್ಕೆ ಬರುತ್ತದೆಯೇ ಎಂಬುದನ್ನು ಹೇಳಬೇಕು !

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೇಳಿದ್ದರಿಂದ ಆ ರೀತಿ ಹೇಳಿದೆ. ಕೇಂದ್ರ ಸರ್ಕಾರದವರು ಕ್ಷಾಮ ಪರಿಹಾರಕ್ಕೆಂದು ಏನು ಹಣವನ್ನು ಕೊಡುತ್ತಾರೋ ಅದನ್ನು ಅದೇ

ಉದ್ದೇಶಕ್ಕಾಗಿ ಖರ್ಚು ಮಾಡಬೇಕಾಗುತ್ತದೆ. ಎರಡನೆಯ ಉದ್ದೇಶಕ್ಕೆ ಖರ್ಚು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಪ್ಪ.—ಈ ಯೋಜನೆಯ ಅಂದಾಜು ಮೊಬಲಗೆಷ್ಟು?

ಶ್ರೀ ವೀರೇಂದ್ರ ಪಾಟೀಲ್.—ಎರಡು ಕೋಟಿ ರೂಪಾಯಿಗಳಾಗುತ್ತದೆ.

Freedom Fighters in receipt of Pension facilities

400. Sri N. LOKAYYA NAIK (Virajpet).—

Will the Minister of State for Minor Irrigation be pleased to state :—

the number of persons in the State considered as freedom fighters and are in receipt of pension facilities ?

Sri A. J. DODDAMETI (Minister of State for Minor Irrigation).—

3,069.

ಶ್ರೀ ಎನ್. ಲೋಕಯ್ಯನಾಯ್ಕ್.—ವಿಶ್ರಾಂತಿ ವೇತನವನ್ನು ಯಾವ ಯಾವ ಕಾರಣಗಳಿಂದ ಕೊಡಿದ್ದರೆ ಕೊಡುತ್ತೀರಾ ?

ಶ್ರೀ ಎ. ಜೆ. ದೊಡ್ಡಮೇಟಿ.—55 ವರ್ಷ ವಯಸ್ಸಾಗಿರಬೇಕು. 6 ತಿಂಗಳು ಜೈಲು ಶಿಕ್ಷೆ ಅನುಭವಿಸಿರಬೇಕು ಮತ್ತು ಅವರ ವಾರ್ಷಿಕ ಉತ್ಪನ್ನ 2,400 ರೂಪಾಯಿಗಳೊಳಗೆ ಇರಬೇಕು. ಇಷ್ಟು ಅರ್ಹತೆ ಇದ್ದರೆ ಕೊಡಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಕೆ. ಟಿ. ಭಾಷ್ಯಂ ಎಂಬ ಸ್ವತಂತ್ರ್ಯ ಹೋರಾಟಗಾರ ರೊಬ್ಬರು ಇದ್ದಿದ್ದು ನಿಜವೇ ! ಅವರ ಪತ್ನಿ ಈ ವೇತನಕ್ಕಾಗಿ ಅರ್ಜಿ ಸಲ್ಲಿಸಿದ್ದು ನಿಜವೇ ? ಅವರಿಗೆ ಈ ವೇತನವನ್ನು ಮಂಜೂರು ಮಾಡುವುದಕ್ಕೆ ಮೊದಲು ಅವರು ಸತ್ತಿದ್ದು ನಿಜವೇ !

ಶ್ರೀ ಎ. ಜೆ. ದೊಡ್ಡಮೇಟಿ.—ಕೆ. ಟಿ. ಭಾಷ್ಯಂ ಅವರ ಪತ್ನಿ ಅರ್ಜಿ ಕೊಟ್ಟಿದ್ದು ನಿಜವಿದೆ. ಅವರಿಗೆ 50 ರೂಪಾಯಿಗಿಂತ ಹೆಚ್ಚು ವಿಶ್ರಾಂತಿ ವೇತನವನ್ನು ಕೊಡುವುದಕ್ಕೆ ನನಗೆ ಅಧಿಕಾರ ಇರಲಿಲ್ಲ. ಆದ್ದರಿಂದ ಅದನ್ನು ಮಂಜೂರಾತಿಗಾಗಿ ಕ್ಯಾಬಿನೆಟ್‌ಗೆ ಕಳಿಸಲಾಯಿತು. ನಂತರ ಕ್ಯಾಬಿನೆಟ್‌ನಲ್ಲಿ 100 ರೂಪಾಯಿಗಳ ವಿಶ್ರಾಂತಿ ವೇತನ ಕೊಡಬೇಕೆಂದು ತೀರ್ಮಾನವಾಯಿತು. ಅದರಂತೆ ಅವರು ತಗೆದುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ವಿಶ್ರಾಂತಿ ವೇತನಕ್ಕಾಗಿ ಅವರು ಮನೆಗೂ ವಿಧಾನಸೌಧಕ್ಕೂ ಬಹಳ ಕಾಲ ಓಡಾಡಿ ಅವರು ಸತ್ತ ಮೇಲೆ ವಿಶ್ರಾಂತಿ ವೇತನವನ್ನು ಮಂಜೂರು ಮಾಡಿದ್ದು ನಿಜವಲ್ಲವೇ !

ಶ್ರೀ ಎ. ಜೆ. ದೊಡ್ಡಮೇಟಿ.—ನಿಜವಲ್ಲ.

ಶ್ರೀ ಡಿ. ಬಿ. ಕಲ್ಮಂಕರ್.—ಈಗ ವಿಶ್ರಾಂತಿ ವೇತನ ಪಡೆಯುತ್ತಿರುವ 3,069 ಮಂದಿಯಲ್ಲಿ ಎಷ್ಟು ಮಂದಿಗೆ 6 ತಿಂಗಳ ಸಜಾ ಆಗಿದೆ ! ಸಜಾ ಆಗಿರುವ ಬಗ್ಗೆ ಇವರಿಗೆ ಕಾಂಗ್ರೆಸ್ ಕಮಿಟಿಯವರು ಸರ್ಟಿಫಿಕೇಟ್ ಕೊಟ್ಟಿದ್ದಾರೆಯೇ ಅಥವಾ ಜೈಲ್ ಅಧಿಕಾರಿಗಳು ಕೊಟ್ಟಿದ್ದಾರೆಯೇ?